1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ. **2651/2024**

ಹೆಸರುಃ ಅಮೃತ ಚಾಸಾಃ 1

ಗಂಡನ ಹೆಸರುಃ ವೀರಭದ್ರಪ್ಪ ಪ್ರಾಸಾ: 1

ವಯಸ್ಸುಃ 26 ವರ್ಷ

ಉದ್ಯೋಗಃ ಗೃಹಿಣಿ

ವಾಸ ಸ್ಥಳಃ ತಿಪ್ಪಗೊಂಡನಹಳ್ಳಿ ಗ್ರಾಮ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 04-11-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಚಾಸಾ-4 ರಿಂದ 9 ರವರು ನಮ್ಮ ನೆರೆ-ಹೊರೆಯವರು. ಆರೋಪಿತರು ನಮ್ಮ ಗ್ರಾಮದವರು.

ದಿಃ 13-03-2024 ರಂದು ರಾತ್ರಿ 10-30 ರ ಸಮಯದಲ್ಲಿ ನಾನು ನಲ್ಲಿಯಲ್ಲಿ ನೀರನ್ನು ತರಲು ಹೋದಾಗ ನಮ್ಮ ಮನೆಯ ಹಿಂದೆ ಹಾಕಿರುವ ಕಸವನ್ನು ತೆಗಿ ಎಂದು 1ನೇ ಆರೋಪಿ ನನ್ನ ಕೈಯನ್ನು ಹಿಡಿದು ಕೆಟ್ಟ-ಕೊಳಕ ಬೈದು ನನ್ನ ಕಪಾಳಕ್ಕೆ ಹೊಡೆದಿರುತ್ತಾರೆ. ನಂತರ 2ನೇ ಆರೋಪಿಯು ಸಹ ನನಗೆ ಬೈದು, ನನ್ನ ಕೈ ಕಾಲುಗಳನ್ನು ಮತ್ತು ನಾನು ತೊಟ್ಟಿದ್ದ ನೈಟಿಯನ್ನು ಎಳೆದಾಡಿರುತ್ತಾನೆ ಸದರಿ ಜಗಳವನ್ನು ನಮ್ಮ ಅಕ್ಕ ಪಕ್ಕದ ಮನೆಯವರು ಬಿಡಿಸಿರುತ್ತಾರೆ.

ದಿಃ 14-03-2024 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ನಾನು ಟೀ ಕುಡಿಯುತ್ತಿದ್ದಾಗ 3 ರಿಂದ 5ನೇ ಆರೋಪಿತರು ಬಂದು ಕಸವನ್ನು ತೆಗಿ ಬಾ ಎಂದು ಪುನಃ ಗಲಾಟೆ ತೆಗೆದಿರುತ್ತಾರೆ. 2 ಮತ್ತು 3ನೇ ಆರೋಪಿತರು ನನ್ನ ಕೂದಲನ್ನು ಹಿಡಿದೆಳೆದಾಡಿರುತ್ತಾರೆ. 2ನೇ ಆರೋಪಿ ದೊಣ್ಣೆಯಿಂದ ಹೊಡೆಯಲು ಪ್ರಯತ್ನಿಸಿರುತ್ತಾರೆ 3ನೇ ಆರೋಪಿ ನನ್ನ ಮನೆಯ ಮೇಲೆ ಪೆಟ್ರೋಲನ್ನು ಹಾಕಿ ಸುಡೋಣ ಎಂದು ಬೆದರಿಕೆ ಹಾಕಿರುತ್ತಾರೆ. ಸದರಿ ವಿಚಾರವಾಗಿ ನಾನು ಠಾಣೆಗೆ ಹಾಜರಾಗಿ ದೂರನ್ನು ದಾಹಲಿಸಿರುತ್ತಾನೆ.

ಸಾಕ್ಷಿ ಕಡತದಲ್ಲಿನ ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಅದರಲ್ಲಿನ ಸಾಕ್ಷ್ಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ 15-03-204 ರಂದು ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ 1 ಗಂಟೆಯಿಂದ 2 ಗಂಟೆಯವರೆಗೂ ಮಹಜರನ್ನು ಜರುರಿಸಿರುತ್ತಾರೆ. ಸಾಕ್ಷಿ ಕಡತದಲ್ಲಿನ ಸದರಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಅದರಲ್ಲಿನ ಸಾಕ್ಷ್ಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಭಾವಚಿತ್ರವನ್ನು ತೆಗೆದಿರುತ್ತಾರೆ.

ಸಾಕ್ಷಿ ಕಡತದಲ್ಲಿ ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಸದರಿ ಸಮಯಕ್ಕೆ ನಾನು ಹಾಜರುಪಡಿಸಿದ ಒಂದು ನೈಟಿಯನ್ನು ಪೊಲೀಸರು ವಶಕ್ಕೆ ಪಡೆದಿರುತ್ತಾರೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ ಸದರಿ ದಾಖಲೆ ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆಯನ್ನು ಅದನ್ನು ನಿಪಿ-5 ಎಂದು ಅದರಲ್ಲಿನ ಸಾಕ್ಷ್ಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸದರಿ ನಿಪಿ-5 ಅನ್ನು ನಿಪಿ-2 ರ ಸಮಯದಲ್ಲಿ ಬರೆಯಲಾಗಿರುತ್ತದೆ. ನಿಪಿ-2 ರ ಸಮಯಕ್ಕೆ ಹಾಜರುಪಡಿಸಿದ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನೇರಳೆ ಬಣ್ಣದ ನೈಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು ಮಾ-1 ಎಂದು ನಿಶಾನೆಗೊಳಿಸಲಾಯಿತು.

ನಾನು ಯಾವುದೇ ಮುಂದುವರೆದ ಹೇಳಿಕೆ ಕೊಟ್ಟಿಲ್ಲ. ನನ್ನ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ದೂರು, ಮಹಜರ್ ಮತ್ತು ಮುಂದುವರೆದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು, ಮಹಜರ್ ಮತ್ತು ಮುಂದುವರೆದ ಹೇಳಿಕೆಗೆ ನೋಡಲಾಗಿ ಸಾಕ್ಷಿಯು ದೂರು, ಮಹಜರ್ ಮತ್ತು ಮುಂದುವರೆದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ದಿಃ 13-03-2024 ರಂದು ಆರೋಪಿತರೆಲ್ಲರೂ ಸೇರಿ ಅವಾಚ್ಯವಾಗಿ ಬೈದರು ಎಂದರೆ ಸರಿ. 2ನೇ ಆರೋಪಿ ನಾನು ತೊಟ್ಟಿದ್ದ ನೈಟಿಯನ್ನು ಎಳೆದಾಡಿ ಸಾರ್ವಜನಿಕವಾಗಿ ಅವಮಾನಪಡಿದನು ಎಂದರೆ ಸರಿ. 3ನೇ ಆರೋಪಿ ಅವಳನ್ನೇನು ನೋಡುತ್ತೀಯಾ ಎಂದು ನನ್ನ ತಲೆ ಕೂದಲನ್ನು ಹಿಡಿದೆಳೆದಾಡಿರುತ್ತಾನೆ ಎಂದರೆ ಸರಿ. 4 ಮತ್ತು 5ನೇ ಆರೋಪಿ ನನ್ನನ್ನು ನೆಲಕ್ಕೆ ಕೆಡವಿಕೊಂಡು ಮನಸ್ಸೊ ಇಚ್ಚೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ನಮ್ಮ ಗ್ರಾಮಸ್ಥರು ಬಂದು ಗಲಾಟೆ ಬಿಡಿಸಿರುತ್ತಾರೆ ಎಂದರೆ ಸರಿ. ನಮ್ಮ ಗ್ರಾಮಸ್ಥರ ಮಾತಿಗೆ ಬೆಲೆಕೊಟ್ಟು ತಕ್ಷಣ ಯಾವುದೆ ದೂರನ್ನು ದಾಖಲಿಸಿಲ್ಲ ಎಂದರೆ ಸರಿ.

4ನೇ ಆರೋಪಿ 2 ಮತ್ತು 3ನೇ ಆರೋಪಿತರಿಗೆ ಹೇಳಿ ಮಚ್ಚಿನಿಂದ ಕೊಲೆ ಮಾಡಿಸುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. 2ನೇ ಆರೋಪಿ ತನ್ನ ಅಣ್ಣನನ್ನು ಕರೆದು ಮಚ್ಚನು ತೆಗೆದುಕೊಂಡು ಬರುವಂತೆ ಪ್ರಚೋದಿಸಿ ನಮ್ಮನೆಲ್ಲಾ ಪೆಟ್ರೋಲ್ ಹಾಕಿ ಸುಟ್ಟು ಬಿಡೋಣ ಎಂದರೆ ಸರಿ .

ನಿಪಿ-2 ರ ಸಮಯಕ್ಕೆ ನನ್ನೊಂದಿಗೆ ಚಾಸಾ-2 ಮತ್ತು 3 ರವರು ಹಾಜರಿದ್ದು, ಸದರಿಯವರ ಸಹಿ ಪಡೆದಿರುತ್ತಾರೆ ಎಂದರೆ ಸರಿ. ನಿಪಿ-6 ಅನ್ನು ಸಹ ಸ್ಥಳದಲ್ಲಿ ತಯಾರಿಸಿ

ಅದಕ್ಕೂ ಸಹ ನನ್ನೊಂದಿಗೆ ಚಾಸಾ-2 ಮತ್ತು 3 ರವರೊಂದಿಗೆ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ . ಸದರಿ ಗಲಾಟೆಯನ್ನು ನಮ್ಮ ಗ್ರಾಮಸ್ಥರಾದ ಚಾಸಾ-4 ರಿಂದ 9 ರವರು ಬಿಡಿಸಿ ಸಮಾಧಾನ ಮಾಡಿರುತ್ತಾರೆ ಎಂದರೆ ಸರಿ. ನನಗೆ ಸದರಿ ಗಲಾಟೆಯಿಂದ ಸಣ್ಣ-ಪುಟ್ಟ ಪೆಟ್ಟುಗಳಾಗಿದ್ದು ಮನೆಯಲ್ಲೇ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ .

ದಿಃ 14-03-2024 ರಂದು ಆರೋಪಿತರು ಪುನಃ ಜಗಳ ತೆಗೆದಾಗ ಚಾಸಾ-4 ರಿಂದ 9 ರವರೇ ಜಗಳ ಬಿಡಿಸಿರುತ್ತಾರೆ ಎಂದರೆ ಸರಿ . ಸದರಿ ವಿಚಾರವಾಗಿ ನಾನು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಆರೋಪಿತರು ನನಗೆ ಯಾವುದೇ ಕೊಲಿನಿಂಗ ಆಗಲೀ ಮಚ್ಚಿ ನಿಂದ ಆಗಲೀ ಹಲ್ಲೆ ಮಾಡಿಲ್ಲ ಎಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಪ್ರಥಮ ಪಿ ಯು ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-1ರಲ್ಲಿ ಬರೆದ ವಿಚಾರ ನನಗೆ ಗೊತ್ತಿದೆ. 2ನೇ ಆರೋಪಿ ಮನೆಗೂ ನಮ್ಮ ಮನೆಗೂ ಎಷ್ಟು ದೂರವಾಗುತ್ತದೆ ಎಂದರೆ ನಮ್ಮ ಮನೆಯ ಹಿಂದೆ ರಸ್ತೆ ಇದ್ದು, ರಸ್ತೆಯ ನಂತರ ಆರೋಪಿತರ ಮನೆ ಎಂದು ನುಡಿಯುತಾರೆ. ನಿಪಿ-1 ರಲ್ಲಿ ನೀರನ್ನು ತರಲು ಎಲ್ಲಿಗೆ ಹೋಗಿದ್ದಿರಿ ಎಂದರೆ ಸಾಕ್ಷಿ ದೇವಸ್ಥಾನದ ಬಳಿ ನಲ್ಲಿ ಇದ್ದು, ಅಲ್ಲಿಂದ ನೀರು ತರಲು ಹೋಗಿದ್ದೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ನಿಪಿ-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಹೇಳಿದಂತಹ ಗಲಾಟೆ ನಲ್ಲಿಯ ಬಳಿ ಆಗಿತೋ ಅಥವಾ ಎಲ್ಲಿ ನಡೆಯಿತೋ ಎಂದರೆ ಸಾಕ್ಷಿ ನಮ್ಮ ಮನೆಯ ಹಿಂಭಾಗ ನಡೆಯಿತು ಎಂದು ನುಡಿಯುತ್ತಾರೆ. ರಾತ್ರಿ 10-30 ರ ಸಮಯಕ್ಕೆ ಸಾಮಾನ್ಯವಾಗಿ ಯಾರೂ ಸಹ ನೀರನ್ನು ತರಲು ಹೋಗುವುದಿಲ್ಲ ಎಂದರೆ ಸಾಕ್ಷಿ ಸದರಿ ಸಮಯದಲ್ಲಿ ನೀರಿನ ಬರವಿದದ್ದಿ ಕಾರಣ ನಲ್ಲಿಬಳಿ ಬಹಳ ಜನರು ಇದ್ದ ಕಾರಣ ನಾನು ಹೋಗಿದ್ದೆ. ರಾತ್ರಿ 10-30 ರ ಸಮಯಕ್ಕೆ ಬೆಳಕು ಇಲ್ಲದ ಕಾರಣ ಬೀದಿ ದೀಪ ಇಲ್ಲದ ಕಾರಣ ಜನರನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸಾಕ್ಷಿ ಜನರಿದ್ದರು ಎಂದು ನುಡಿಯುತ್ತಾರೆ. ಸದರಿ ಸಮಯಕ್ಕೆ ಯಾವ ಜನರು ಇದ್ದರು ಎಂದು ದೂರಿನಲ್ಲಿ ನಮೂದಿಸಿದ್ದೀರಿಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಜನರ ಹೆಸರನ್ನು ನನಗೆ ಹೇಳಲಾಗುವುದಿಲ್ಲ. ಸದರಿ ಸಮಯಕ್ಕೆ

ಬೆಳಕು ಇಲ್ಲದ ಕಾರಣ ನಾನು ಹೇಳಿದಂತಹ ಘಟನೆ ನಡೆಯದ ಕಾರಣ ನಾನು ಆರೋಪಿತರ ಮೇಲೆ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಕಪಾಳಕ್ಕೆ ಹೊಡೆದಿಲ್ಲ ಮತ್ತು ನಾನು ಕೊಟ್ಟಿದ್ದ ಮು ಮಾ-1 ಅನ್ನು ಹಿಡಿದೆಳೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲಿನ ಹಳೆಯ ದ್ವೇಷದಿಂದ ನಾನು ಅವರ ಮೇಲೆ ವೃತಾ ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ13-03-2024 ರಂದು ನಾನು ಹೇಳಿಧದಂತಹ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಮು ಮಾ -1 ನನಗೆ ಸಂಬಂಧಿಸಿದ ನೈಟಿ ಅಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಘಟನೆ ಎಷ್ಟು ಸಮಯದವರೆಗೂ ನಡೆಯಿತೆಂದರೆ 10-30 ಕ್ಕೆ ಪ್ರಾರಂಭವಾಗಿ ಎಷ್ಟು ಹೊತ್ತಿಗೆ ಮುಗಿಯಿತು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಗಲಾಟೆ ಸಮಯಕ್ಕೆ ಎಷ್ಟು ಸಮಯ ನಡೆದಿದೆ ಎಂದು ನನಗೆ ಹೇಳಲಾಗುವುದಿಲ್ಲ.

ದಿಃ 14-03-2024 ರಂದು ಈ ಹಿಂದೆ ನಡೆದ ಘಟನೆಯ ಕುರಿತೇ ನಾನು ನಿಪಿ-1 ರಲ್ಲಿ ಉಲ್ಲೇಖಿಸಿ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಾನು ಹೇಳಿದಂತಹ ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ನಾನು ಅವರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ಬಗಳಿಂದ ಬೈದರು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿತರು ಕಣಿಗೆಯಿಂದ ಹೊಡೆಯಲು ಮುಂದಾದಾಗ ಗ್ರಾಮಸ್ಥರು ಬಂದು ಬಿಡಿಸಿದ್ದರು ಎಂದು ಸುಳ್ಳು ನಮೂದಿಸಿದ್ದರು ಎಂದರೆ ಸರಿಯಲ್ಲ. ನಿಪಿ-1 ಅನ್ನು ದಾಖಲಿಸುವ ಸಮಯಕ್ಕೆ ಸದರಿ ಜಗಳವನ್ನು ಯಾರು ಬಿಡಿಸಿದರು ಎಂದು ನಿಪಿ-1 ರಲ್ಲಿ ನಮೂದಿಸಲು ನನಗೇನು ತೊಂದರೆ ಇರಲಿಲ್ಲ ಎಂದರೆ ಸರಿ. ಹಾಗಾಗಿ ನಾನು ಹೇಳಿದಂತಹ ಘಟನೆ ಯಾವುದೂ ನಡೆಯದೇ ಇದ್ದರೂ ಸಹ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನವೀನ ಎಂಬಾತ ನನ್ನ ತಮ್ಮ. ಸದರಿ ನವೀನ 2ನೇ ಆರೋಪಿಯ ಮಗನ ಮೇಲೆ ಬೈಕನ್ನು ಹತ್ತಿಸಿದ ಕಾರಣ ಸದರಿಯವರು ದಾಖಲಿಸಿದ ಸಿಸಿ ನಂಃ 572/2022 ಕ್ಕೆ ಪ್ರತಿಯಾಗಿ ನಾನು ಆರೋಪಿತರ ಮೇಲಿನ ದ್ವೇಷದಿಂದ ಪ್ರಸ್ತು ತದೂರನ್ನು ದಾಖಲಿಸಿದ್ದೇನೆ

ಎಂದರೆ ಸರಿಯಲ್ಲ. 2017 ರಲ್ಲಿ ನಡೆದ ನನ್ನ ವಿವಾಹದ ಸಮಯದಲ್ಲಿ ಆರೋಪಿತರಿಂದ ಪಡೆದ ಸಾಲವನ್ನು ಮರು ಪಾವತಿಸದ ಕಾರಣ ನಾನು ಅವರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-2 ಅನ್ನು ನಾನು ಓದಿಲ್ಲ. ನಿಪಿ-2ಕ್ಕೆ ಸಹಿಯನ್ನು ನಾನು ಠಾಣೆಯಲ್ಲೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಘಟನೆ ನಡೆಯದೇ ಇದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

Sd/-

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**